ಒದಗಿಸಲು ಸರ್ಕಾರ ನೀತಿ ಬದಲಿಸುವುದೇ?

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಸಚಿವರು):-

ಅ) ಇಲ್ಲ.

ಆ) ಸರ್ಕಾರಿ ಆದೇಶ ಸಂಖ್ಯೆ ಸಕಇ 150 ಬಿಸಿಎ 94 ದಿನಾಂಕ: 17-9-94ರ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಆರ್ಥಿಕ ಆಧಾರದ ಮೇಲೆ ಹಾಗೂ ಜಾತಿ ಆಧಾರದ ಮೇಲೆ ನೀಡುತ್ತಿದೆ.

ವಿಷಯ:- ಮಂಗಳೂರು ತಾಲ್ಲೂಕಿನಲ್ಲಿ ಕೈಗಾರಿಕಾ ಘಟಕಗಳಿಗೆ ಸರಕಾರದಿಂದ ಕೊಡ-ಲಾಗಿರುವ ಜಮೀನನ್ನು ಕುರಿತು.

1377 (2379) **ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್):-** ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಗಳೂರು ತಾಲ್ಲೂಕಿನಲ್ಲಿ ಕೈಗಾರಿಕಾ ಘಟಕ (ಬೃಹತ್)ಗಳಿಗೆ ಸರ್ಕಾರದಿಂದ ಕೊಡ-ಲಾಗಿರುವ ಜಮೀನು ಎಷ್ಟು? (ವಿವರ ಒದಗಿಸುವುದು)

ಆ) ಕೈಗಾರಿಕೆಗಳು ಖಾಸಗಿಯವರಿಂದ ಪಡೆದುಕೊಂಡಿರುವ ಜಮೀನು ಎಷ್ಟು? (ಕಂಪನಿವಾರು ವಿವರ ಒದಗಿಸುವುದು)

ಇ) ಸರ್ಕಾರದ ಜಮೀನನ್ನು ಕಂಪನಿಗಳಿಗೆ ಒದಗಿಸಲು ಸರ್ಕಾರದ ನಿಬಂಧನೆಗಳೇನು? ಹಾಗೂ ಹಾಕಿರುವ ನಿಬಂಧನೆ ಏನು?

ಈ) ಸರ್ಕಾರದ ನಿಬಂಧನೆಗಳನ್ನು ಪಾಲಿಸದೇ ಇದ್ದಲ್ಲಿ ಅಂತಹವರ ವಿರುದ್ಧ ಸರ್ಕಾರದವರು ಕೈ-ಗೊಳ್ಳಲಿರುವ ಕ್ರಮಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪ-ನ್ಮೂಲಗಳ ಅಭಿವೃದ್ಧಿ ಸಚಿವರು):-

ಅ) ವಿವರಗಳು ಈ ಕೆಳಗಿನಂತಿವೆ:

ಕ್ರ ಸಂ.	ಘಟಕದ ಹೆಸರು	ಸರ್ಕಾರಿ ಜಮೀನು ಕೊಟ್ಟಿರುವ ವಿಸ್ತೀರ್ಣ (ಎಕರೆ–ಸೆಂಟ್ಸ್)
1.	ಎಂ. ಆರ್. ಪಿ. ಎಲ್.	155-75
2.	ಕುದುರೆಮುಖ ಕಬ್ಬಿಣ ಕಂಪನಿ	2-23

1	2	3
3.	ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್	6-01
	ಒಟ್ಟು:	163-99

ಆ) ವಿವರಗಳು ಈ ಕೆಳಗಿನಂತಿವೆ:

ಕ್ರ ಸಂ.	ಘಟಕದ ಹೆಸರು	ವಿಸ್ತೀರ್ಣ (ಎಕರೆ–ಸೆಂಟ್ಸ್)
1.	ಎಂ. ಆರ್. ಪಿ. ಎಲ್.	1669-75
2.	ಎಂ. ಆರ್. ಪಿ. ಎಲ್. (ಪುನರ್ವಸತಿ)	90-37
3.	ಹೆಚ್. ಪಿ. ಸಿ. ಎಲ್. ರೈಲ್ವೆ ಸೈಡಿಂಗ್	28-44
4.	ಹೆಚ್. ಪಿ. ಸಿ. ಎಲ್. ರೈಲ್ವೆ ಸೈಡಿಂಗ್ (ಪುನರ್ವಸತಿ)	6-77
5.	ಕುದುರೆಮುಖ ಕಬ್ಬಿಣ ಕಂಪನಿ	154-98
6.	ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್	198-99
7.	ಬಿ. ಎ. ಎಸ್. ಎಫ್.	201-70
	ಒಟ್ಟು:	2345-95

ಇ) ಕೈಗಾರಿಕೆಗಾಗಿ ವಿತರಿಸಿದ ಸರ್ಕಾರಿ ಜಮೀನನ್ನು ಕೈಗಾರಿಕೆ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳಿಗೆ ಮಾತ್ರ ಉಪಯೋಗಿಸಿಕೊಳ್ಳಬೇಕಾಗುತ್ತದೆ. ಮತ್ತು ಸರ್ಕಾರದಿಂದ ಪಡೆದ ಜಮೀನನ್ನು ಕೆಐಎಡಿಬಿ (ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ)ಯು ಕೈಗಾರಿಕೆಗಳಿಗೆ ವಿತರಿಸುವಾಗ ಈ ಜಮೀನನ್ನು 21 ವರ್ಷದ ಕಾಲದ ಗುತ್ತಿಗೆ ಮಾರಾಟ ಕರಾರು ಪತ್ರದ ಪ್ರಕಾರ ಹಂಚಿಕೆ ಮಾಡಲಾಗುವುದು. ಜಮೀನನ್ನು ಹಂಚಿಕೆ ಮಾಡಿದ ನಂತರ ನಿಗದಿತ ಸಮಯದಲ್ಲಿ ಜಮೀನನ್ನು ಸಮರ್ಪಕವಾಗಿ ಬಳಸಿಕೊಳ್ಳದಿದ್ದರೆ ಬಳಸದಿರುವ ಜಮೀನನ್ನು ವಾಪಸ್ಸು ಪಡೆಯ–ಲಾಗುವುದು.